

ಹೂಹಗುರ ಎನ್ನುವ ಮಾತು ಈ ಹುಲ್ಲಿನ ಹೂಗಳಿಂದಲೇ ರೂಪುಗೊಂಡಂತಿದೆ



ನಿಸರ್ಗವೇ ಕುಂಚವಾಗಿ ಈ ಹೂಗಳಿಗೆ ಬಣ್ಣ ಬಳಿದಂತಿದೆ

ನಮ್ಮ ಕಣ್ಣಿಗೆ ಕಂಡೂ ಕಾಣದಂತೆ ಉಳಿದುಹೋಗುವ ವಿಸ್ಮಯಗಳಲ್ಲಿ ಹುಲ್ಲಿನ ಹೂವುಗಳೂ ಸೇರಿವೆ. ಅವುಗಳ ಪುಟ್ಟ ಆಕಾರವೇ ಅದಕ್ಕೆ ಕಾರಣ. ಕೆಲವು ಸಾಸಿವೆ ಕಾಳಿನಷ್ಟು, ಕೆಲವು ಜೀರಿಗೆ ಕಾಳಿಗಿಂತ ಚಿಕ್ಕದಾದ ಹೂವುಗಳು. ಈ ಕುಬ್ಜ ಕುಸುಮಗಳ ಚೆಲುವನ್ನು ನಮ್ಮ ಬರಿಗಣ್ಣು ಆಸ್ವಾದಿಸಲು ಸೋಲುತ್ತವೆ.

ಹುಲ್ಲಿನ ಹೂಗಳು ದಿನದ ಎಲ್ಲ ಕಾಲದಲ್ಲೂ ಕಾಣಿಸುವುದಿಲ್ಲ. ಚಳಿಗಾಲದಲ್ಲಿ ನಸುಕಿಗೇ ಎದ್ದು ಹೊರಗೆ ಹೋಗಬೇಕು. ಅದು ಮೈಗೆಲ್ಲ ಥಂಡಿ ಆವರಿಸುವ ಹೊತ್ತು. ತೋಟ, ಗದ್ದೆ, ಬೇಣಗಳಲ್ಲೆಲ್ಲ ಹೆಜ್ಜೆಯೂರಬೇಕು. ಆಗ ಕಚಗುಳಿಯಿಡುವ ಇಬ್ಬನಿಗಳಿಂದ ಕಾಲೆಲ್ಲ ತೋಯ್ದಿರುತ್ತದೆ! ಯಾವುದೋ ಹಕ್ಕಿಯ ಹಾಡಿಗೆ ಕಿವಿಯೊಡ್ಡಿ, ಜೇನ್ನೊಣಗಳ ಝೇಂಕಾರ ಆಲಿಸುತ್ತ ಹುಡುಕಿದರೆ ಇಬ್ಬನಿಗಳ ಭಾರಕ್ಕೆ ತಲೆ ಬಗ್ಗಿಸಿ ನಿಂತ ಹುಲ್ಲಿನ ತೆನೆಗಳು ಕಾಣಿಸುತ್ತವೆ. ಹಾಗೆ ಕಂಡ ಹುಲ್ಲಿನ ತೆನೆಗಳನ್ನು ಗಮನವಿಟ್ಟು ನೋಡಿದರೆ ಹುಲ್ಲಿನ ಹೂವುಗಳು ಗೋಚರಿಸುತ್ತವೆ.

ಹುಲ್ಲಿನ ಕುಲಗೋತ್ರಗಳಿಗೆ ತಕ್ಕಂತೆ ಅವುಗಳು ಪ್ರಖರವಾದ ಬಣ್ಣ ಮತ್ತು ಬೆಡಗಿನಿಂದ ಕೂಡಿರುತ್ತವೆ. ಕೆಲವು ಸೌಮ್ಯ ವರ್ಣಗಳಿಂದ ಕಂಗೊಳಿಸುತ್ತವೆ. ಅವುಗಳ ಬೆಡಗು ಬಿನ್ನಾಣ ಬಹಳ ಹೊತ್ತಿನದೇನೂ ಅಲ್ಲ. ಬಿಸಿಲೇರಿದಂತೆ ಹೂವಿನ ದಳಗಳು ಬಾಡಿ ಮುದುರಿಕೊಳ್ಳುತ್ತವೆ. ಹುಲ್ಲಿನ ತೆನೆಗೇ ಒಣಗಿ ಅಂಟಿಕೊಳ್ಳುತ್ತವೆ. ಅದು ತಮ್ಮ ವಂಶಾಭಿವೃದ್ಧಿಗೆ ಬೀಜಗಟ್ಟುವ ಕ್ಷಣ! ನಾಳೆಗೆ ಹೂವಾಗಲು ಮತ್ತಷ್ಟು ಮೊಗ್ಗುಗಳು ಸಜ್ಜಾಗುತ್ತವೆ! ಚಳಿಗಾಲ ಜೋರಾದ ಹಾಗೆ ಹುಲ್ಲಿನ ತೆನೆಗಳೆಲ್ಲ ಬಾಡಿ ಬೀಜ ನೆಲಕ್ಕುದುರುತ್ತವೆ!

ಅಲ್ಪಾಯುಷಿ ಹುಲ್ಲಿನ ಹೂವುಗಳನ್ನು ಚಿತ್ತಾರವಾಗಿಸುವ ಆಶೆ ನನಗೆ ಇಂದು ನಿನ್ನೆಯದಲ್ಲ. ಪ್ರತಿ ವರುಷವೂ ಅತ್ತ ಒಂದು ಪುಟ್ಟ ಹೆಜ್ಜೆ ಇರಿಸುತ್ತೇನೆ. ಮೈಕ್ರೊಫೋಟೊಗ್ರಫಿಗೆ ಮೈಕ್ರೊಲೆನ್ಸ್ ನನ್ನ ಬಳಿ ಇಲ್ಲವಾದರೂ ಕೆಲವು ಬದಲಿ ಉಪಕರಣಗಳೊಂದಿಗೆ ತೊಡಗಿಕೊಳ್ಳುತ್ತೇನೆ. ಛಾಯಾಗ್ರಹಣಕ್ಕೆ ನಮ್ಮ ನೋಟ ಮತ್ತು ದೃಶ್ಯವನ್ನು ಸಂಯೋಜಿಸುವ ಕ್ರಮವೇ ಮುಖ್ಯವಾಗಿರುವುದರಿಂದ ಅದರಲ್ಲಿ ಗೆಲುವು ಸಿಕ್ಕರೆ ಬಹುತೇಕ ಗೆದ್ದ ಹಾಗೆಯೇ ಎಂಬುದು ಸತ್ಯ. ಕಂಪ್ಯೂಟರ್ ಅಂತೂ ನಮ್ಮ ಸಹಾಯಕ್ಕಿದ್ದೇ ಇದೆ. ■